**ಕರ್ನಾಟಕ ವಿಧಾನಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ಎರಡನೇ ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ–39)**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 36) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ (ಎರಡನೇ ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 15ನೇ ಪ್ರಕರಣದ ತಿದ್ದುಪಡಿ.**– ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) 15ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ಕೆಳಗಿನ ಕೋಷ್ಟಕದ (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದಂತೆ ಅಂದಾಜು ಖರ್ಚಿಗೆ (ಬಿ) ಅಥವಾ (ಸಿ) ಖಂಡದ ಅಡಿಯಲ್ಲಿನ ಯಾವುದೇ ಯೋಜನೆಯನ್ನು ಅದರ (3)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಅನುಮೋದನೆಯಿಲ್ಲದೆ ಮಂಡಲಿಯು ಕಾರ್ಯಗತಗೊಳಿಸತಕ್ಕದ್ದಲ್ಲ, ಎಂದರೆ:–

**ಕೋಷ್ಟಕ**

| **ಕ್ರಮ ಸಂಖ್ಯೆ**<br>(1) | **ಯೋಜನೆ**<br>(2) | **ಅನುಮೋದಿಸುವ ಪ್ರಾಧಿಕಾರ**<br>(3) |
|---|---|---|
| (1) | ಹಣ ನೀಡಿಕೆ ಮೂಲವನ್ನು ಗಣನೆಗೆ ತೆಗೆದುಕೊಳ್ಳದೆ ಹತ್ತು ಕೋಟಿ ರೂಪಾಯಿಗಳಿಗೂ ಹೆಚ್ಚಿನ ವೆಚ್ಚದ ಯೋಜನೆ. | ಸರ್ಕಾರದ ಸಚಿವ ಸಂಪುಟ ಹಂತದಲ್ಲಿ |
| (2) | ಸರ್ಕಾರದ ಅನುದಾನ ಮತ್ತು ಸಾಲಗಳಂತ ಹಣ ನೀಡಿಕೆ ಮೂಲದೊಂದಿಗೆ ಹತ್ತು ಕೋಟಿ ರೂಪಾಯಿಗಳಿಗಿಂತ ಕಡಿಮೆ ವೆಚ್ಚದ ಯೋಜನೆ. | ಸರ್ಕಾರ (ಆಡಳಿತ ಇಲಾಖೆ) |

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 36) 15ನೇ ಪ್ರಕರಣವನ್ನು,-

(ಎ) ಹಣ ನೀಡಿಕೆ ಮೂಲಗಳನ್ನು ಗಣನೆಗೆ ತೆಗೆದುಕೊಳ್ಳದೆ, ಹತ್ತು ಕೋಟಿ ರೂಪಾಯಿಗಳಿಗೂ ಮೇಲಿನ ಯಾವುದೇ ಅಂದಾಜುಗಳ ಸಂದರ್ಭದಲ್ಲಿ ಸಚಿವ ಸಂಪುಟದ ಹಂತದಲ್ಲಿ ಸರ್ಕಾರದ ಅನುಮೋದನೆಯೊಂದಿಗೆ; ಮತ್ತು

(ಬಿ) ಸರ್ಕಾರದ ಅನುದಾನ ಮತ್ತು ಸಾಲಗಳಂತ ಹಣ ನೀಡಿಕೆ ಮೂಲಗಳೊಂದಿಗೆ ಹತ್ತು ಕೋಟಿ ರೂಪಾಯಿಗಳಿಗಿಂತ ಕಡಿಮೆ ವೆಚ್ಚದ ಅಂದಾಜುಗಳಿಗೆ ಸರ್ಕಾರದ ಆಡಳಿತ ಇಲಾಖೆಯ ಹಂತದ ಅನುಮೋದನೆಯೊಂದಿಗೆ,

-ಯೋಜನೆಗಳನ್ನು ಸಿದ್ಧಪಡಿಸಲು ಮತ್ತು ಕೈಗೊಳ್ಳಲು ಮಂಡಳಿಗೆ ಅಧಿಕಾರವನ್ನು ನೀಡುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೆ.ಜೆ. ಜಾರ್ಜ್**
ಬೆಂಗಳೂರು ಅಭಿವೃದ್ಧಿ ಹಾಗೂ ಪಟ್ಟಣ
ಮತ್ತು ಗ್ರಾಮಾಂತರ ಯೋಜನೆ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನಸಭೆ.

## ಅನುಬಂಧ

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಅಧಿನಿಯಮ, 1964ರ

## (1964ರ ಕರ್ನಾಟಕ ಅಧಿನಿಯಮ 36) ಉದ್ಧೃತ ಭಾಗ

Xx xx xx

**15. ಮಂಡಳಿಯ ಸಾಮಾನ್ಯ ಕರ್ತವ್ಯಗಳು.** xx xx xx

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ,-

(ಎ) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ನೀರು ಸರಬರಾಜಿನ ಪರ್ಯಾಪ್ತತೆ ಮತ್ತು ಅದು ಆರೋಗ್ಯಕರವಾಗಿರುವ ಬಗ್ಗೆ ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ;

(ಬಿ) ಬೆಂಗಳೂರು ಮಹಾನಗರ ಪ್ರದೇಶದೊಳಗೆ ಗೃಹಬಳಕೆಯ ಉದ್ದೇಶಗಳಿಗಾಗಿ ಆರೋಗ್ಯಕರವಾದ ನೀರು ಸರಬರಾಜಿಗಾಗಿ ಯೋಜನೆಗಳನ್ನು ತಯಾರಿಸುವುದು ಮತ್ತು ಕಾರ್ಯಗತಗೊಳಿಸುವುದಕ್ಕಾಗಿ;

(ಸಿ) ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಸೂಕ್ತ ಚರಂಡಿ ವ್ಯವಸ್ಥೆಗಾಗಿ ಮತ್ತು ಗ್ರಾಮಸಾರದ ವಿಲೆಗಾಗಿ ಯೋಜನೆಗಳನ್ನು ತಯಾರಿಸುವುದು ಮತ್ತು ಕಾರ್ಯಗತಗೊಳಿಸುವುದಕ್ಕಾಗಿ

- ಕಾಲಕಾಲಕ್ಕೆ ಕ್ರಮಗಳನ್ನು ಕೈಗೊಳ್ಳುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

ಪರಂತು, ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಅಂದಾಜು ಖರ್ಚಿನ (ಬಿ) ಅಥವಾ (ಸಿ) ಖಂಡದ ಮೇರೆಗಿನ ಯಾವುದೇ ಯೋಜನೆಯನ್ನು ರಾಜ್ಯ ಸರ್ಕಾರದ ಅನುಮೋದನೆಯ ಹೊರತು ಮಂಡಲಿಯು ಕಾರ್ಯಗತಗೊಳಿಸತಕ್ಕದ್ದಲ್ಲ.

Xx xx xx

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ ಘಟಕ, ಬೆಳಗಾವಿ, ಪಿ7, ಕಾಸೂ , 1000–ಪ್ರತಿಗಳು 29ನೇ ನವೆಂಬರ್, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TWELFTH SESSION**

# THE BANGALORE WATER SUPPLY AND SEWERAGE (SECOND AMENDMENT) BILL, 2016

**(L.A. Bill No. 39 of 2016)**

A Bill further to amend the Bangalore Water Supply and Sewerage Act, 1964.

Whereas, it is expedient further to amend the Bangalore Water Supply and Sewerage Act, 1964 (Karnataka Act 36 of 1964) for the purposes hereinafter appearing:

Be it enacted by the Karnataka State Legislature in the sixty-seventh year of the Republic of India as follows:-

**1. Short title and commencement.-** (1) This Act may be called the Bangalore Water Supply and Sewerage (second Amendment) Act, 2016.

(2) It shall come into force at once.

**2. Amendment of section 15.-** In the Bangalore Water Supply and Sewerage Act, 1964 (Karnataka Act 36 of 1964) in section 15, in sub-section (2), for the proviso, the following shall be substituted, namely:-

"Provided that no scheme under clause (b) or (c) estimated to the cost as specified in column (2) of the Table below shall be carried out by the Board without approval of the Authority specified in column(3) thereof, namely:-

**Table**

| **SL. No. (1)** | **Scheme (2)** | **Approving Authority (3)** |
|---|---|---|
| (1) | A scheme costing more than rupees ten crores irrespective of source of funding | Government Cabinet Level |
| (2) | A scheme costing less than rupees ten crores with Government grant or loan as source of funds | Government (Administrative Department) |

## STATEMENT OF OBJECTS AND REASONS

It is considered necessary to amend section 15 of the Bangalore Water Supply and Sewerage Board Act, 1964, to empower the Board to prepare and carryout scheme,-

(a) with the approval of the Government at cabinet level in respect of any estimates above ten crore rupees, irrespective of source of funds; and

(b) with the approval of the Government Administrative Department level to estimates of less than ten crore rupees with Government grants or loan as source of funds.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**K.J.GEORGE**
Minister for Bangalore Development
and Town and Country Planning

**S.Murthy**
Secretary (I/C)
Karnataka Legislative Assembly.

## ANNEXURE

## EXTRACT FROM THE BANGALORE WATER SUPPLY AND SEWERAGE ACT, 1964 (KARNATAKA ACT 36 OF 1964)

**XX** **XX** **XX**

**15. General duties of the Board.— XX** **XX** **XX**

(2) Without prejudice to the provisions of sub-section (1), it shall be the duty of the Board to take steps from time to time,—

(a) for ascertaining the sufficiency and wholesomeness of water supplies within the

Bangalore Metropolitan Area;

(b)for preparing and carrying out schemes for the supply of wholesome water for domestic purposes within the Bangalore Metropolitan Area;

(c)for preparing and carrying out schemes for the proper sewerage of, and the disposal of the sewage of, theBangalore Metropolitan Area.

Provided that no scheme under clause (b) or (c) estimated to cost more than a crore of rupees shall be carried out by the Board except with the approval of the State Government.

**XX** **XX** **XX**

Government Press, Suvarna Soudha Unit, Belgavi, 29th November 2016 P7, W.D., Copies 1000